ದಿನಾಂಕಃ 18.06.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿ ಪರ ಸಹಾಯಕ ಸರ್ಕಾರಿ ವಕೀಲರಿಂದ:**

ದಾವಾ ಸರ್ವೇ ನಂಬರ್ 50 ರಲ್ಲಿ ಅಂದಾಜು 50 ಎಕರೆಗೂ ಹೆಚ್ಚಿನ ವಿಸ್ತೀರ್ಣ ಇರುತ್ತದೆ. ಸದರಿ ಸ.ನಂ. ನಲ್ಲಿ ಅರಣ್ಯ ಪ್ರದೇಶವು ಎಷ್ಟು ವಿಸ್ತೀರ್ಣದಿಂದ ಕೂಡಿರುತ್ತದೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಹೊಸಕೆರೆ ಗ್ರಾಮದ ಸ.ನಂ.50 ರಲ್ಲಿ 4 ಎಕರೆ 38 ಗುಂಟೆ ವಿಸ್ತೀರ್ಣದ ಜಮೀನು ಅರಣ್ಯ ಪ್ರದೇಶ ಎಂದು ಘೋಷಿಸಲಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಹೆಸರಿಗೆ ಪಹಣಿಯು 2020-21 ರ ಸಾಲಿನಲ್ಲಿ ಬಂದಿರುತ್ತದೆ. ಸಾಗುವಳಿ ಚೀಟಿಯನ್ನು ನಾನು 2012-13 ನೇ ಸಾಲಿನಲ್ಲಿ ಪಡೆದುಕೊಂಡಿರುತ್ತೇನೆ. ಸಾಗುವಳಿ ಚೀಟಿಯನ್ನು ನಾನು ಪಡೆಯುವ ಕಾಲದಲ್ಲಿ ಪಹಣಿಯು ನನ್ನ ಹೆಸರಿನಲ್ಲಿ ಇರಲಿಲ್ಲ. ದಿ.16.10.2020 ರಂದು ನಾನು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿ ಕಾಫೀ, ಕಾಳುಮೆಣಸು ಮತ್ತು ಸಿಲ್ವರ್ ಮರವನ್ನು ಅಕ್ರಮವಾಗಿ ನೆಡುತ್ತಿದ್ದ ಬಗ್ಗೆ FOC.5/2020-21 ರಡಿಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಕೃಷಿ ಮಾಡಿಕೊಂಡು ಅನುಭವದಲ್ಲಿ ಇರವುದು ಸುಳ್ಳು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಕಾಫೀ, ಕಾಳು ಮೆಣಸು ಮತ್ತು ಸಿಲ್ವರ್ ಗಿಡಗಳನ್ನು ಬೆಳೆದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸುತ್ತ ನಾನು ಯಾವುದೇ ತಂತಿ ಬೇಲಿಯನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ಸ್ವತ್ತಿನ ಸುತ್ತ ಸೋಲಾರ್ ಬೇಲಿಯು ಇರುತ್ತದೆ ಎಂದು ನುಡಿಯುತ್ತಾರೆ.

ನಾನು ಒಟ್ಟು 4 ಎಕರೆ ಜಮೀನಿನ ಹಿಡುವಳಿದಾರನಾಗಿರುತ್ತೇನೆ. ನಾನು ಯಾವುದೇ ಸಾಗುವಳಿ ಚೀಟಿಯನ್ನು ಹೊಂದಿರುವುದಿಲ್ಲ ಮತ್ತು ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿಯು ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಅಣ್ಣೇಗೌಡರ ತೋಟ, ಉತ್ತರಕ್ಕೆ ಸರ್ಕಾರಿ ಸ.ನಂ.26 ಮತ್ತು ದಕ್ಷಿಣಕ್ಕೆ ಕೃಷ್ಣೇಗೌಡರ ತೋಟ ಬರುತ್ತದೆ. ದಿ.07.07.2021 ರಂದು ಪ್ರತಿವಾದಿಯವರು ನಾನು ಕೃಷಿ ಮಾಡುತ್ತಿದ್ದುದ್ದನ್ನು ತಡೆದಿರುತ್ತಾರೆ ಎಂಬುದು ಸುಳ್ಳು ಎಂದರೆ ಸಾಕ್ಷಿಯು ಅವರು ತಡೆಯಲು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ದಾವಾ ಜಮೀನಿನಲ್ಲಿ ಯಾವುದೇ ಹಾನಿ ಮಾಡದಿದ್ದರೂ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿಯು ಅವರು ಹಾನಿ ಮಾಡಲು ಪ್ರಯತ್ನಿಸಿದ ಕಾರಣ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯವರು ನನಗೆ ತೊಂದರೆ ನೀಡಿದ ಬಾಬ್ತು ನಾನು ಪೋಲಿಸ್ ಠಾಣೆಯಲ್ಲಿ ಯಾವುದೇ ಪ್ರಕರಣವನ್ನು ದಾಖಲು ಮಾಡಿರುವುದಿಲ್ಲ. ನಾನು ಅಕ್ರಮವಾಗಿ ಒತ್ತುವರಿ ಮಾಡಿರುವುದನ್ನು ತಡೆಯಲು ಬಂದ ಕಾರಣ ನಾನು ಪ್ರತಿವಾದಿಯವರ ವಿರುದ್ಧ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರಸ್ತುತ ಪಹಣಿಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ-

1 ರಲ್ಲಿ ಸರ್ವೇ ನಕ್ಷೆಯಂತೆ ಗಡಿ ಗುರುತನ್ನು ಮಾಡಿರುವುದಾಗಿ ನಮೂದಿಸಿದ್ದು, ಅದರ ಬಾಬ್ತು ನಾನು ಯಾವುದೇ ನಕ್ಷೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-8 ರಿಂದ 11 ರ ಫೋಟೋಗಳನ್ನು ಸ.ನಂ.50 ನ ಬಳಿ ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸ.ನಂ. ನ ಬಳಿ ನಿಪಿ-8 ರಿಂದ 11 ರ ಫೋಟೋಗಳನ್ನು ತೆಗೆದಿರುವ ಬಾಬ್ತು ಯಾವುದೇ ಕುರುಹು ಇಲ್ಲ ಎಂದರೆ ಸರಿಯಲ್ಲ. ನಿಪಿ-4 ರ ಪ್ರಕಾರ ಸದರಿ ಜಮೀನನ್ನು ಊರು ದನಗಳಿಗೆ ಮುಪ್ಪತ್ತಿನ ಕಾರಣ ಮೀಸಲಿಡಲಾಗಿರುತ್ತದೆ ಮತ್ತು 99 ರ ನಡುತೋಪು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.